ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ನರಕಾರ ಟೆಲಿಫೋನು ಎಕ್ಸ್‌ಚೇಂಜ್ ಮಂಜೂರು ಮಾಡತಕ್ಕ ವಿಚಾರದಲ್ಲಿ ಅನುಸರಿಸತಕ್ಕಂಥ ಟೆಲಿಫೋನು ಇಲಾಖೆಯ ನೀತಿ ಏನು ?

Sri G. B. SHANKAR RAO.—Post and Telegraph Department have got their own programme. According to it, they sanction Automatic Exchanges.

Collection of Phodi Fees

*Q.—366. Sri N. NANJE GOWDA (Krishnarajpet).—

Will the Government be pleased to state:—

(*a*) the number of persons from whom phodi fees have been collected by the Office of the Sub-Registrar, Krishnarajpet Taluk, together with survey Nos. for which the fees have been so collected from 1st January 1963 to 1st January 1964;

(*b*) the survey numbers which were surveyed and phodi affected and the number of persons whose lands were surveyed and phoded during the abovesaid period ?

A.—Sri M. V. KRISHNAPPA (Minister for Revenue).—

(*a*) Phodi fees has been collected from 1,173 persons in respect of 1,477 survey numbers.

(*b*) 409 survey numbers involving 751 persons were surveyed and phodi affected during the period from 1st January 1963 to 1st January 1964.

ಶ್ರೀ ಎನ್. ನಂಜೇಗೌಡ.—ಉತ್ತರ (ಎ)ನಲ್ಲಿ 1477 ಸರ್ವೆ ನಂಬರುಗಳ ಸಂಬಂಧದಲ್ಲಿ 1173 ವ್ಯಕ್ತಿಗಳಿಂದ ಫೋಡು ಶುಲ್ಕ ವಸೂಲ್ಮಾಡಲಾಗಿದೆ ಎಂದು ಉತ್ತರ ಹೇಳಿದೆ. ಇದರಲ್ಲಿ 409 ಸರ್ವೇ ನಂಬರುಗಳ ಬಗ್ಗೆ ಸರ್ವೆ ಮಾಡಿ ಫೋಡು ಮಾಡಲಾಯಿತು ಎಂದು ಹೇಳಿದೆ. ಉಳಿದ ಸರ್ವೇ ನಂಬರುಗಳ ಬಗ್ಗೆ ಮಾಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ ಸಿಬ್ಬಂದಿ ಕಡಿಮೆಯಾಗಿಬಿಟ್ಟಿರುವುದರಿಂದ ಕೆಲಸ ನಿಧಾನವಾಗಿದೆ. ಸರ್ವೇ ಸೆಟಲ್‌ಮೆಂಟ್ ಕೆಲಸ ಮುಗಿದಿದೆ. ಸಪ್ಲೈಸ್ ಸ್ಟಾಫ್ ಫುಡ್ ಕೆಲಸಕ್ಕೆ ತೆಗೆದುಕೊಂಡಿದೆ. ಈ ಕೆಲಸ up to date ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಈ ತಾಲ್ಲೂಕಿನಲ್ಲಿ ಫೋಡು ಕೆಲಸ ನಿಂತುಹೋಗಿರುವುದು ನಿಜ.

ಶ್ರೀ ಟಿ. ಮಾದಯ್ಯಗೌಡ.—ಸ್ವಾಮಿ, ಈ ಫೋಡಿನ ಕೆಲಸವಾಗದೆ ಬಾವಿ ತೆಗೆಯತಕ್ಕಂಥ ಸಾಲ ಮಗ್ಯೆರೆ ಕೇಳಿದರೆ, ರೆಕಾರ್ಡುಗಳು ಇಲ್ಲದೆ ಸಾಲ ಕೊಡುವುದಿಲ್ಲ ಎಂದು ಹೇಳುತ್ತಾರೆ. ಈ ಕೆಲಸ ಆದಷ್ಟು ಬೇಗ ಆಗುವಂತೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ತೊಂದರೆಯಾಗಿರುವುದು ನಿಜ, ಸರ್ಕಾರದವರು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಸರ್‌ಪ್ಲಸ್ ಸ್ಟಾಫ್ ಉಪಯೋಗಿಸಿಕೊಂಡು ಫೋಡಿನ ಕೆಲಸವನ್ನು ಜಾಗ್ರತೆ ಮಾಡಿಸುತ್ತೇವೆ. ಆ ಕೆಲಸವನ್ನು ತೀವ್ರತೆಯಿಂದ ಮಾಡುತ್ತಿದ್ದೇವೆ.

ಶ್ರೀ ಎನ್. ನಂಜೇಗೌಡ.—ಜಮೀನುಗಳಿಗೆ ಪಂಪ್‌ಸೆಟ್ಟು ಹಾಕಿಕೊಂಡು ಪವರನ್ನು ಸ್ಯಾಂಕ್ಷನ್ ಮಾಡಬೇಕಾದರೆ ಸ್ವಂತ ಜಮೀನು ಎಲ್ಲದೆ ಎಂದು ಹೇಳಿದನಂತರ ಒಪ್ಪಿಗೆ ಕೊಡಬೇಕು. ಬೇರೆಯವರ ಹೆಸರಿನಲ್ಲಿ ಜಮೀನು ಇರುವುದರಿಂದ ಸಂಬಂಧಪಟ್ಟ ರೆವಿನ್ಯೂ ಇಲಾಖೆಯವರು ಒಪ್ಪಿಗೆ ಕೊಡದಿರುವುದರಿಂದ ಪವರ್ ತೆಗೆದುಕೊಳ್ಳುವುದು ತಡವಾಗಿದೆ, ಇದನ್ನು ಆದಷ್ಟು ಬೇಗನೆ ಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ಶ್ರೀ ಮಾದಪ್ಪಗೌಡರು ಅದನ್ನೇ ಕೇಳಿದ್ದು. ಬಾವಿಗಾಗಿ ಲೋನ್ ತೆಗೆದುಕೊಳ್ಳುವ ಸಂದರ್ಭದಲ್ಲಿ ಫೋಡಿ ರಕಾರ್ಡುಗಳು ಸಿಕ್ಕದೆ ತೊಂದರೆಯಾಗಿದೆ. ಕೆಲವು ಕಡೆ ತಾಲ್ಲೂಕು ತಹಸೀಲ್ದಾರರು ಅಬ್ಜೆಕ್ಷನ್ ಮಾಡದೆ ರೈತರಿಗೆ ಕೊಟ್ಟುಬಿಡುತ್ತಾರೆ. ಇನ್ನೂ ಕೆಲವು ತಹಸೀರ್ದಾರರು ಅಬ್ಜೆಕ್ಷನ್ ಮಾಡುವುದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಅದನ್ನು ಸಾಧ್ಯವಾದಷ್ಟು ಬೇಗ ಮಾಡಬೇಕೆನ್ನುವುದು ಸರ್ಕಾರದ ಉದ್ದೇಶವಿದೆ.

ಶ್ರೀ ನಂಜೀವನಾಥ ಐಕಳ.—ನಮ್ಮ ಪ್ರಾಂತ್ಯದ ಅನೇಕ ಫೋಡಿ ಕೆಲಸಗಳು ಬಾಕಿ ಇವೆ. ಆದ್ದರಿಂದ ಪಟೇಲರಿಂದ, ಶಾನುಭೋಗರಿಂದ ಫೋಡಿ ಕೆಲಸಗಳನ್ನು ಅದಷ್ಟು ಬೇಗ ಮಾಡಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಶ್ರೀ ಸಂಜೀವನಾಥ ಐಕಳ ಅವರು ಹೇಳುವುದರಲ್ಲಿ ಒಂದು ಅರ್ಥವಿದೆ. ಸೌತ್ ಕೆನರ ಜಿಲ್ಲೆಯಲ್ಲಿರುವ ಪಟೇಲರು, ಶ್ಯಾನುಭೋಗರಿಗೆ ಸರ್ವೆ ಟ್ರೈನಿಂಗ್ ಆಗಿರುತ್ತದೆ ಅವರನ್ನು ಉಪಯೋಗಿಸಿಕೊಳ್ಳಿ ಎಂದು ಹೇಳುತ್ತಿದ್ದಾರೆ. ನಮ್ಮ ಸ್ಟಾಫ್ ಸಾಕಾಗದೆ ಇದ್ದಾಗ ಯೋಚನೆ ಮಾಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಫೋಡಿ ಕೆಲಸ ಮಾಡಿಸುವುದಕ್ಕೆ 500 ಜನರನ್ನು ಸರ್ವೆ ಸೆಟರ್‌ಮೆಂಟ್‌ಗೆ 500 ಜನರನ್ನು ತೆಗೆದುಕೊಳ್ಳುತ್ತೀರೆಂದು ಆದೇಶ ಕೊಟ್ಟಿದ್ದೀರಾ, ಇವರಿಂದ ಕೆಲಸ ಮಾಡಿಸುವುದಕ್ಕೆ ಇನ್ನು ಎಷ್ಟು ದಿವಸಗಳು ಆಗಬಹುದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಾಗಲೇ ಸರ್ವೆ ಸೆಟಲ್‌ಮೆಂಟ್ ಟ್ರೈನಿಂಗ್ ಆಗಿರುವ ಸ್ಟಾಫ್ ಇದೆ. ಅದರ ಜೊತೆಗೆ 500 ಜನ ಸರ್ವೆಯರ್‌ಗಳನ್ನು ರೆಕ್ರೂಟ್ ಮಾಡಿದ್ದೇವೆ. ಈಗಿರುವ ಸ್ಟಾಫ್‌ಗೆ 6 ತಿಂಗಳು ಟ್ರೈನಿಂಗ್ ಕೊಡಬೇಕಾಗುತ್ತದೆ. ಈ ವರ್ಷದಲ್ಲಿ ಅವರ ಟ್ರೈನಿಂಗ್ ಪ್ರಾರಂಭವಾಗುತ್ತದೆ. ನಂತರ ಒಂದು ವರ್ಷದಲ್ಲಿ ಕೆಲಸವಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬಾವಿ ತೆಗೆಯಲು ಸಾಲ ತೆಗೆದುಕೊಳ್ಳಬೇಕಾದರೆ ಆರ್.ಆರ್. 5-6ನ್ನು ಏನು ಮಾಡಿದರೂ ಕೊಡುವುದಿಲ್ಲ. ಇದನ್ನು ಶ್ರೀಮಾರ್ ಕೊಂಡಜ್ಜಿಬನಪ್ಪನವರ ಗಮನಕ್ಕೆ ತಂದು ಒಂದೂವರೆ ವರ್ಷವಾದರೂ ಇನ್ನೂ ಕೊಟ್ಟಿಲ್ಲ, ಇದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎನ್. ನಂಜೇಗೌಡ.—ನಮ್ಮ ತಾಲ್ಲೂಕಿನಲ್ಲಿ ಇದುವರೆಗೆ 14 ಸಾವಿರ ನಂಬರ್‌ಗಳಾಗಿ, ಅದರಲ್ಲಿ 3 ಸಾವಿರ ಜನರಿಂದ ಮಾತ್ರ ವಸೂಲು ಮಾಡರಾಗಿದೆ. 11 ಸಾವಿರ ಬಾಕಿ ಇದೆ. ಅದಕ್ಕೆ ಯಾರನ್ನಾದರೂ ಬೇರೆಯವರನ್ನು ನೇಮಿಸಿ ಅದಷ್ಟು ಜಾಗ್ರತೆ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ 10-20 ವರ್ಷಗಳಿಂದ ಫೋಡಿ ವಸೂಲಿ ಕೆಲಸ ನಿಂತುಹೋಗಿದೆ. ಒಂದು ವರ್ಷದ ಎರಡು ವರ್ಷದ ವಸೂಲಿ ಬಾಕಿ ಇದೆ. 20 ವರ್ಷದಿಂದ ಲೋನ್ ಫೋಡಿ ವಸೂಲು ಮಾಡದೆ ಹಾಗೆಯೇ ಇದೆ. ಸರ್ವೆ ಸೆಟರ್‌ಮೆಂಟ್ ಸ್ಟಾಫ್ ಮತ್ತು ರೆಕ್ರೂಟ್ ಮಾಡಿಕೊಳ್ಳುವ ಸ್ಟಾಫ್ ಇವರುಗಳಿಂದ 2 ವರ್ಷಗಳಲ್ಲಿ ಮುಗಿಸಬೇಕು ಎಂದು ಅಂದುಕೊಂಡಿದ್ದೇವೆ. ಬಹುಶಃ 3 ವರ್ಷವಾದರೂ ಆಗಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—500 ಜನರನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ, ಇನ್ನೂ ರೆಕ್ರೂಟ್ ಕೂಡ ಆಗಿಲ್ಲ. ಅವರಿಗೆ 6 ತಿಂಗಳ ಟ್ರೈನಿಂಗ್ ಬೇರೆ ಕೊಡಬೇಕು. ಈ ಯೋಜನೆಯನ್ನು ಯಾವಾಗ ಮುಗಿಸುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಷ್ಟು ಬೇಗ ಆದರೆ ಅಷ್ಟು ಬೇಗ ಮುಗಿಸುತ್ತೇವೆ. ಹಾಲಿ ನಮ್ಮ ಸ್ಟಾಫ್ ಇದೆ. ಅವರನ್ನು ಹಾಕಿಕೊಂಡು ಹೊಸಬರು ಬರುವುದಕ್ಕೆ ಮೊದಲು ಕೆಲಸ ಮಾಡಿಸುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆರ್.ಆರ್.—5-6 ಇದನ್ನು ತಾಲ್ಲೂಕ್ ಆಫೀಸಿನಲ್ಲಿಟ್ಟು ಅರ್ಜಿದಾರರು ಅರ್ಜಿಕೊಟ್ಟ 2 ವರ್ಷದಲ್ಲಿ ಸಿಗುವಂತೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಮೊದಲು ತಾಲ್ಲೂಕ್ ಆಫೀಸ್‌ನಲ್ಲಿ ಆಗುತ್ತಿತ್ತು. ಈಗ ಶಾನುಭೋಗರು ಮತ್ತು ಪಟೇಲರು ಸಹ ಹಿಂದಿನ ಹಾಗೆ ಮಾಡಲು ಎಂದು ಹೇಳಿದ್ದೇವೆ. ಆದ್ದರಿಂದ 2 ಕಡೆ ಏರ್ಪಾಡು ಮಾಡಿದ್ದೇವೆ. ಇನ್ನು ಮೇಲೆ ಕೆಲಸಗಳು ಜಾಗ್ರತೆಯಾಗುತ್ತದೆ.